
ಪತ್ನಿ ನ ಸೂನ್ ಸೂಕ್, ಮಕ್ಕಳಾದ ಲೀ ದಹೆವೊ ಮತ್ತು ಲೀ ಮಿಯಾಗೊ ಅವರೊಂದಿಗೆ ಲೀ

# ಟೇಕ್ವಾಂಡೊ ಮಾಸ್ಟರ್ ಲೀ

ದಕ್ಷಿಣ ಕೊರಿಯಾದಿಂದ ಬೆಂಗಳೂರಿಗೆ ಬಂದ ಲೀ ಜೇ ಕು ಇಲ್ಲಿನ ನೂರಾರು ಮಕ್ಕಳಿಗೆ ಕೊರಿಯಾದ ಸಮರ ಕಲೆ ಟೇಕ್ವಾಂಡೊವನ್ನು ಕಲಿಸುತ್ತಾರೆ. ಕಳೆದ 17 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದ ಲೀ, ಇದೀಗ ಕುಟುಂಬ ಸಮೇತ ಬೆಂಗಳೂರಿನಲ್ಲಿ ನೆಲೆ ನಿಂತಿದ್ದಾರೆ.

ಕೊರಿಯಾದ ಸಮರ ಕಲೆ ಟೇಕ್ವಾಂಡೊ. ಇದು ಕೇರಳದ ಕಳರಿಪಯಟ್ಟು, ಜಪಾನ್‌ನ ಜೂಡೋಗಳನ್ನೇ ಹೋಲುತ್ತದೆ. ಇದನ್ನು ನಮ್ಮ ಮಕ್ಕಳಿಗೆ ಕಲಿಸಲೆಂದೇ ದೂರದ ದಕ್ಷಿಣ ಕೊರಿಯಾದಿಂದ ಬೆಂಗಳೂರಿಗೆ ಬಂದವರು ಲೀ ಜೇ ಕು.

ಟೇಕ್ವಾಂಡೊ ಆತ್ಮರಕ್ಷಣೆಗೆ, ವ್ಯಾಯಾಮವಾಗಿ ಅಷ್ಟೇ ಅಲ್ಲದೆ ಕ್ರೀಡೆಯಾಗಿಯೂ ಜನಪ್ರಿಯ. ಹೀಗಾಗಿ ಇದನ್ನು ಕಳೆದ 2000ನೇ ಇಸವಿಯಲ್ಲಿ ಒಲಿಂಪಿಕ್ಸ್ ಗೇಮ್‌ನಲ್ಲೂ ಸೇರಿಸಲಾಯಿತು. ಹಾಗೆ ನೋಡಿದರೆ ಬೆಂಗಳೂರಿನಲ್ಲಿ ಟೇಕ್ವಾಂಡೊ ಕಲಿಸುವ ಸರಿಯಾದ ಶಿಕ್ಷಕರು ಇರಲಿಲ್ಲ. ಈ ಕೊರತೆಯನ್ನು ನೀಗಿಸಿದವರು ಲೀ. ಬೆಂಗಳೂರಿನ ಕಲ್ಯಾಣನಗರ ಸಮೀಪದ ಕಮ್ಮನಹಳ್ಳಿಯಲ್ಲಿ 17 ವರ್ಷಗಳ ಹಿಂದೆಯೇ ಲೀ ಟೇಕ್ವಾಂಡೊ ಅಕಾಡೆಮಿ ಸ್ಥಾಪಿಸಿದರು. ನೂರಾರು ಮಕ್ಕಳಿಗೆ ಈ ಸಮರ ಕಲೆಯನ್ನು ಕಲಿಸುತ್ತಿದ್ದಾರೆ. ಮಕ್ಕಳನ್ನು ಪ್ರೀತಿಯಿಂದ ಕಾಣುವ ಲೀ ಈಗ ಮಕ್ಕಳಿಗೆಲ್ಲ ಪ್ರೀತಿಯ 'ಮಾಸ್ಟರ್ ಲೀ' ಆಗಿದ್ದಾರೆ.

'ನಾನು 1996ರಲ್ಲಿ ಬೆಂಗಳೂರಿಗೆ ಬಂದೆ. ದಕ್ಷಿಣ ಕೊರಿಯಾದಿಂದ ಚೆನ್ನೈಗೆ ಬಂದು ಅಲ್ಲಿಂದ ನನ್ನ ಗೆಳೆಯರೊಬ್ಬರು ಒಂದು ಹಳೇ ಕಾರಿನಲ್ಲಿ ಇಲ್ಲಿಗೆ ಕರ್ಕೊಂಡು ಬಂದ್ರು. ಆ ಪ್ರಯಾಣ ನೆನೆಸಿಕೊಂಡ್ರೆ ಈಗಲೂ ಮೈ ಜುಂ ಎನ್ನುತ್ತದೆ. ರಾತ್ರಿಯಿಡೀ ಪ್ರಯಾಣ, ಕತ್ತಲು, ಹಳ್ಳತಗ್ಗುಗಳಿಂದ ಕೂಡಿದ ರಸ್ತೆ. ಭಾರತ, ಚೆನ್ನೈ, ಬೆಂಗಳೂರು ಎಂದ್ರೆ ಹೀಗಿರಬಹುದು ಅಂದ್ಕೊಂಡೇ ಇರಲಿಲ್ಲ. ಅಂತೂ ಎಂದೆಂದೂ ಮರೆಯಲಾಗದಂತಹ ಪ್ರಯಾಣ ಅದು' ಎಂದು ಫ್ಲ್ಯಾಷ್‌ಬ್ಯಾಕ್‌ಗೆ ಹೋಗುತ್ತಾರೆ ಲೀ.

'ಬೆಂಗಳೂರಿಗೆ ಬಂದ ಹೊಸದರಲ್ಲಿ ಇಲ್ಲಿ ಜೀವನ ನಡೆಸುವುದು ಬಹಳ ಕಷ್ಟ. ವಾಪಸ್ ದಕ್ಷಿಣ ಕೊರಿಯಾಕ್ಕೆ ಹೋಗಿ ಬಿಡಬೇಕು ಅನಿಸಿತ್ತು. ಬರಬರುತ್ತಾ ಇಲ್ಲಿಗೆ ಮಾನಸಿಕವಾಗಿ ಹೊಂದಿಕೊಂಡು ಒಂದು ವರ್ಷದಲ್ಲೇ ಇಲ್ಲಿನ ಜೀವನಶೈಲಿಗೆ, ಬದುಕಿಗೆ ಸರಿಯಾಗಿ ಹೊಂದಿಕೊಂಡೆ. ನನ್ನ ಪತ್ನಿಗೂ ಬೆಂಗಳೂರು ಹಿಡಿಸಿದೆ. ಮಕ್ಕಳೂ ಇಲ್ಲಿಯೇ ಇರಲು ಇಷ್ಟಪಡುತ್ತಾರೆ. ಆರಂಭದಲ್ಲಿ ದೇಶ, ಭಾಷೆ, ಆಹಾರ, ಜೀವನಶೈಲಿ ಎಲ್ಲವೂ ತದ್ವಿರುದ್ಧ ಎನಿಸಿದ್ದರೂ ಈಗ ಬೆಂಗಳೂರು ಸ್ವರ್ಗ ಎನಿಸಿದೆ' ಎನ್ನುತ್ತಾರೆ ಇವರು.

'ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಬಡತನ ರೇಖೆಗಿಂತ ಕೆಳಗೆ ಬಹಳ ಮಂದಿ ಇದ್ದಾರೆ. ಇಲ್ಲಿನ ಬಡ ಮಕ್ಕಳು ಉತ್ತಮ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇಂಥ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಟೇಕ್ವಾಂಡೊ ಮೂಲಕ ಬದುಕಿನ ಅನೇಕ ಸಂಗತಿಗಳನ್ನು ಮಕ್ಕಳಿಗೆ ಕಲಿಸಬಹುದು. ಅವರಲ್ಲಿ ಜೀವನ ಕಲೆಯ ಬಗ್ಗೆ ಅರಿವು ಮೂಡಿಸಬಹುದು. ಆತ್ಮವಿಶ್ವಾಸ ಹೆಚ್ಚಿಸಬಹುದು. ಈ ಕೆಲಸವನ್ನು ನಾನಿಲ್ಲಿ ಮಾಡುತ್ತಿದ್ದೇನೆ' ಎಂದು ತಮ್ಮ ವೃತ್ತಿ ಬದುಕಿನ ಬಗ್ಗೆ ಬೆಳಕು ಚೆಲ್ಲುತ್ತಾರೆ ಈ ಟೇಕ್ವಾಂಡೊ ಮಾಸ್ಟರ್.

ಟೇಕ್ವಾಂಡೊ ಮಾತ್ರವಲ್ಲದೆ ಬದುಕುವ ಕಲೆ, ಫಿಟ್‌ನೆಸ್ ಮತ್ತು ತೂಕ ಇಳಿಸುವ ಕೆಲವು ವಿಶಿಷ್ಟ ವ್ಯಾಯಾಮಗಳನ್ನೂ ಲೀ ಇಲ್ಲಿ ಮಕ್ಕಳಿಗೆ ಕಲಿಸುತ್ತಾರೆ.

ಹಾಗೆಂದು ದಕ್ಷಿಣ ಕೊರಿಯಾದಲ್ಲಿ ಉದ್ಯೋಗಾವಕಾಶಗಳಿಲ್ಲವೆ? ಖಂಡಿತಾ ಇದೆ. ದಕ್ಷಿಣ ಏಷ್ಯಾ ರಾಷ್ಟ್ರಗಳಿಗೆ ಹೋಲಿಸಿದರೆ ದಕ್ಷಿಣ ಕೊರಿಯಾದ ಆರ್ಥಿಕ ವ್ಯವಸ್ಥೆ ಚೆನ್ನಾಗಿದೆ. ಭಾರತದಲ್ಲಿ ಇನ್ನೂ ಹೆಚ್ಚು ಅವಕಾಶಗಳಿವೆ, ಕೆಲಸ ಮಾಡಲು ಉತ್ತಮ ವಾತಾವರಣವಿದೆ ಎಂಬುದು ಇವರ ಭಾವನೆ.

'ಭಾರತವನ್ನು ಅದರಲ್ಲೂ ಬೆಂಗಳೂರನ್ನು ಬಹಳ ಪ್ರೀತಿಸುತ್ತೇನೆ. ಈಗ ಇದೇ ನನ್ನ ಹೋಮ್ ಟೌನ್ ಅನ್ನಿಸಿಬಿಟ್ಟಿದೆ' ಎನ್ನುವ ಲೀ, ವಿದೇಶಗಳಿಂದ ಬಂದವರಿಗೆ ಬೆಂಗಳೂರು ನಿಜವಾಗಿಯೂ ಸ್ವರ್ಗ. ಇಲ್ಲಿನ ಜನ ಬೇಗ ಆಪ್ತರಾಗುತ್ತಾರೆ. ದಕ್ಷಿಣ ಕೊರಿಯಾದಿಂದ ಬಂದ ನನ್ನನ್ನು ಇಲ್ಲಿ ಸ್ವಂತ ಕುಟುಂಬದವರ ಹಾಗೆ ನೋಡಿಕೊಳ್ಳುವ ಗೆಳೆಯರು ಇದ್ದಾರೆ. ಇಲ್ಲಿನ ಜನರ ಆತ್ಮೀಯತೆ, ಪ್ರೀತಿ ನೋಡಿದರೆ ಇಲ್ಲಿಂದ ಬಿಟ್ಟು ನಮ್ಮ ದೇಶಕ್ಕೆ ಹೋಗುವುದೇ ಬೇಡ ಎನಿಸಿದ್ದಲ್ಲದೆ ನಾನೂ ಭಾರತೀಯನೇ ಎನಿಸಿಬಿಟ್ಟಿದೆ' ಎನ್ನುತ್ತಾರೆ.

ಇಷ್ಟೆಲ್ಲ ಗುಣಾತ್ಮಕ ಅಂಶಗಳ ಮಧ್ಯೆಯೂ ಎಲ್ಲೋ ಒಂದು ಕಪ್ಪುಚುಕ್ಕೆ ಇಟ್ಟಂತೆ ಇತ್ತೀಚೆಗೆ ಬೆಂಗಳೂರು ದಿನೇ ದಿನೇ ಕಲುಷಿತಗೊಳ್ಳುತ್ತಿದೆ. ರಸ್ತೆ ಟ್ರಾಫಿಕ್‌ನಿಂದ ಕೂಡಿದೆ, ಜನಸಂದಣಿ ವಿಪರೀತವಾಗಿದೆ. ಅಪರಾಧಗಳ ಸಂಖ್ಯೆ ಹೆಚ್ಚುತ್ತಿದೆ. ಯುವಜನರಲ್ಲಿ ಸಾಮಾಜಿಕ ಮೌಲ್ಯ ಕುಸಿಯುತ್ತಿದೆ ಎಂಬ ವಿಷಾದವೂ ಇವರಿಗಿದೆ.

## ಸಸ್ಯಾಹಾರವೇ ಇಷ್ಟ

ಇಲ್ಲಿ ದಕ್ಷಿಣ ಭಾರತ ಮತ್ತು ಉತ್ತರ ಭಾರತ ಎರಡೂ ರೀತಿಯ ಊಟ ತಿಂಡಿ ನನಗಿಷ್ಟ. ಚಿಕನ್ ಬಿರಿಯಾನಿ, ತಂದೂರಿ ಚಿಕನ್, ಇಡ್ಲಿ ವಡೆ ನನಗೆ, ನನ್ನ ಕುಟುಂಬದವರಿಗೆ ಬಹಳ ಇಷ್ಟ. ಎಲ್ಲ ನಾನ್‌ವೆಜ್ ಅಡುಗೆಗಳೂ ಇಷ್ಟ. ಆದರೆ ಆರೋಗ್ಯದ ದೃಷ್ಟಿಯಿಂದ ನಾನು ಹೆಚ್ಚಾಗಿ ಬರೀ ಸಸ್ಯಾಹಾರವನ್ನೇ ತೆಗೆದುಕೊಳ್ಳುತ್ತೇನೆ. ಇಲ್ಲಿನ ಊಟ ನನಗೆಷ್ಟು ಇಷ್ಟ ಎಂದರೆ ನಾನು ನಮ್ಮೂರಿಗೆ ಹೋದರೂ ಎಷ್ಟು ಬೇಗ ಇಲ್ಲಿಗೆ ವಾಪಸ್ ಬರ್ತೀನೋ ಅನಿಸುತ್ತಿರುತ್ತದೆ' ಎಂದು ಊಟ, ತಿಂಡಿ, ಆದರಾತಿಥ್ಯದ ಬಗ್ಗೆ ವಿವರಿಸುತ್ತಾರೆ ಲೀ.

ಕೊರಿಯಾ ಭಾಷೆ ಹೆಚ್ಚು ಕಡಿಮೆ ಚೀನಾದ ಭಾಷೆಯನ್ನೇ ಹೋಲುತ್ತದೆ. ಈ ಭಾಷೆಗೆ 'ಹಂಜಾ' ಎಂಬ ಅಧಿಕೃತ ಹೆಸರು ಇದೆ. ಆದರೆ ಲೀ ಹೆಚ್ಚು ಇಷ್ಟಪಡುವುದು ಇಂಗ್ಲಿಷ್ ಭಾಷೆಯನ್ನೇ. ಹಾಗೆಂದು ಕನ್ನಡ ಭಾಷೆ ಬಗ್ಗೆಯೂ ವಿಶೇಷ ಒಲವು ಇದೆ. ಚೆನ್ನಾಗಿದ್ದೀರಾ.., ಊಟ ಆಯ್ತಾ.. ಇತ್ಯಾದಿ ಒಂದೆರಡು ಶಬ್ದ ಬರುತ್ತದೆ. ಕನ್ನಡ ಕಲಿಯಬೇಕು ಎನ್ನುವ ಆಸೆ ಇದೆ. ಆದರೆ ಕಲಿಯಲು ಸಮಯ ಸಾಕಾಗುತ್ತಿಲ್ಲ. ಪತ್ನಿ, ಮಕ್ಕಳೂ ಕನ್ನಡ ಕಲಿತಿಲ್ಲ. ಪತ್ನಿ ನ ಸೂನ್ ಸೂಕ್ ಗೃಹಿಣಿ. ಇಬ್ಬರು ಗಂಡು ಮಕ್ಕಳಾದ ಲೀ ದಹೆವೊ (16 ವರ್ಷ), ಲೀ ಮಿಯಾಗೊ (15 ವರ್ಷ). ಇಬ್ಬರೂ ಇಲ್ಲೇ ಕಾಲೇಜಿನಲ್ಲಿ ಓದುತ್ತಿದ್ದಾರೆ.

ಬೆಂಗಳೂರಿನಲ್ಲಿ ಕೊರಿಯಾದ ಸುಮಾರು 300 ವಿದ್ಯಾರ್ಥಿಗಳೂ ಸೇರಿದಂತೆ ಅಂದಾಜು 1500 ಮಂದಿ ಇದ್ದಾರೆ. ರೆಸ್ಟೋರೆಂಟ್‌ಗಳು, ವ್ಯಾಪಾರ, ಆ್ಯಸೆಸರೀಸ್ ಸ್ಟೋರ್, ಕೊರಿಯಾ ಮೂಲದವರೇ ನಡೆಸುವ ಎರಡು ಅತ್ಯಂತ ಹಳೆಯ ರೆಸ್ಟೋರೆಂಟ್‌ಗಳಾದ ಹೇ ಕುಂ ಗಾಂಗ್ ಕ್ಯಾಸೆಲ್ ಸ್ಟ್ರೀಟ್‌ನಲ್ಲಿ ಮತ್ತು ಸು ರಾ ರಂಗ್ ಟ್ಯಾನೆಲ್ ರಸ್ತೆಯಲ್ಲಿದೆ.

★ ಅವನೀಶ್